**ಓ.ಎಸ್. ನಂ. 93/2020** **ಪಿ.ಡಬ್ಲ್ಯೂ- 1**

<u>ಸಾಕ್ಷಿಯನ್ನು ದಿನಾಂಕ **14.7.2022** ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ರಿಂದ 3 ಪರ ವಕೀಲರಿಂದಃ</u>

ನಿಪಿ1 ನ್ನು ಬರೆಯಲು ಸಿದ್ದೇಗೌಡ ರವರು ಮಾಹಿತಿ ನೀಡಿರುತ್ತಾರೆ. ನಿಪಿ1 ನ್ನು ಬರೆಸಲು ಆ ಸಮಯದಲ್ಲಿ ಏನೇನು ದಾಖಲೆಯನ್ನು ನೀಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಉಪನೊಂದಣಾಧಿಕಾರಿ ಕಛೇರಿಯಲ್ಲಿ ದಾಖಲೆಗಳನ್ನು ಪ್ರತಿವಾದಿಗಳು ನೀಡಿರುತ್ತಾರೆ. ದಾವಾಸ್ವತ್ತನ್ನು ನಾನು ಖರೀದಿ ಮಾಡುವ ಸಮಯದಲ್ಲಿ ಪ್ರತಿವಾದಿಗಳು ದಾವಾಸ್ವತ್ತಿನ ಮೇಲೆ ಮೊದಲನೇ ಹೆಂಡತಿ ದಾವೆ ಹೂಡಿರುತ್ತಾರೆ ಮತ್ತು ಆಕೆಗೂ ಭಾಗ ನೀಡಬೇಕು ಎಂದು ನನಗೆ ತಿಳಿಸಿರುತ್ತಾರೆ. ಸದರಿ ಡಿಕ್ರಿಯಂತೆ ಖಾತೆ ಮಾಡಿಸುತ್ತೇನೆ 2 ಮತ್ತು 3 ನೇ ಪ್ರತಿವಾದಿಗಳನ್ನು ಸಿದ್ದೇಗೌಡ ಕರೆದುಕೊಂಡು ಬಂದು ಅವರಿಗೆ ತಿಳಿಯದಂತೆ ನಿಪಿ1 ನ್ನು ನನಗೆ ಬರೆಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಸಿದ್ದೇಗೌಡ ಖಾತೆ ಮಾಡಿಸುತ್ತೇವೆ ಎಂದು ಹೇಳಿ ನಿಪಿ1 ನ್ನು ಪಡೆದುಕೊಂಡು ನಂಬಿಕೆ ದ್ರೋಹ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ನಿಪಿ1 ರ ಸಾಕ್ಷಿಯಾದ ಕುನ್ನೇಗೌಡ ಮಾತ್ರ ಪರಿಚಯವಿರುತ್ತದೆ, ಉಳಿದವರು ಸಿದ್ದೇಗೌಡರ ಪರಿಚಯಸ್ಥ ರಾಗಿರುತ್ತಾರೆ. ಪ್ರತಿವಾದಿಗಳು ಅವಿದ್ಯಾವಂತರಾಗಿದ್ದು, ಅವರಿಗೆ ತಿಳಿಯದಂತೆ ನಿಪಿ1 ನ್ನು ಸೃಷ್ಟಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ3 ರಲ್ಲಿ ಯಾವ ದಿನಾಂಕ ಉಪನೋಂದಣಾಧಿಕಾರಿಗೆ ಬಂದು ಕ್ರಯಪತ್ರ ಬರೆದುಕೊಡಲು ತಿಳಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನಿಪಿ1 ರಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಕ್ರಯಪತ್ರ ತಯಾರು ಮಾಡಿಸಿರುವುದಿಲ್ಲ ಮತ್ತು ಉಳಿದ ಹಣದ ಬಾಬ್ತು ಡಿ.ಡಿ ಯನ್ನು ಪಡೆದುಕೊಂಡಿರುವುದಿಲ್ಲ, ಏಕೆಂದರೆ ಪ್ರತಿವಾದಿಗಳು ನನಗೆ ಜವಾಬು ನೀಡಿರುವುದಿಲ್ಲ. ನನ್ನ ಬಳಿ ಉಳಿದ ಹಣವು ತಯಾರಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು ನನ್ನ ನೋಟಿಸ್ ಗೆ ಜವಾಬು ನೀಡಿರುತ್ತಾರೆ ಎಂದರೆ ಸರಿ. ಸದರಿ ಜವಾಬು ನೋಟಿಸನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ1 ಎಂದು ಗುರುತಿಸಲಾಯಿತು. 2 ಮತ್ತು 3 ನೇ ಪ್ರತಿವಾದಿ ನ್ಯಾಯಾಲಯದ ಆದೇಶದಂತೆ ದಾವಾಸ್ವತ್ತಿನ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತು ನನ್ನ ಸ್ವಾಧೀನದಲ್ಲಿರುತ್ತದೆ. ನಿಪಿ1 ರಲ್ಲಿ ಪ್ರತಿವಾದಿಗಳು ಸ್ವಾಧೀನ ಉಳಿಸಿಕೊಂಡಿರುತ್ತಾರೆ ಎಂದರೆ ಸರಿ. ನಾನು ವಾದಿಗೆ ಹಣವನ್ನು ನಗದು ಮೂಲಕ ನೀಡಿರುತ್ತೇನೆ. ನನಗೆ ವಾರ್ಷಿಕ 5 ಲಕ್ಷ ರೂ ಆದಾಯ ಇರುತ್ತದೆ. ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. ನಾನು ವಾದಿಗಳಿಗೆ 4,22,500/- ಮತ್ತು 2,50,000/- ಹಣ ನೀಡಿದ ಬಗ್ಗೆ ನನ್ನ ಆದಾಯ ತೆರಿಗೆ ದಾಖಲೆಯಲ್ಲಿ ತೋರಿಸಿರುವುದಿಲ್ಲ. ನಿಪಿ1 ರಲ್ಲಿ ನಾನು ಪ್ರತಿವಾದಿಗಳಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ಆದ ನಂತರ 1 ನೇ ಪ್ರತಿವಾದಿ ನನ್ನ ಬಳಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ1 ರ ಸಮಯದಲ್ಲಿ ವ್ಯವಸಾಯದ ಜಮೀನನ್ನು ಕೃಷಿ ಭೂಮಿ ಹೊಂದಿರುವವರು ಮಾತ್ರ ಖರೀದಿ ಮಾಡಬೇಕು ಎಂದು ಇತ್ತು ಎಂದರೆ ಸರಿ. ನಾನು ರೈತನಾಗದ ಕಾರಣ ನಾನು ದಾವಾಸ್ವತ್ತನ್ನು ಖರೀದಿ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಕ್ರಯದ ಕರಾರಿಗೆ ಮೂರು ವರ್ಷಗಳ ಕಾಲ ಪರಿಮಿತಿ ಇರುತ್ತದೆ ಎಂದರೆ ಸರಿ.

2014 ರಲ್ಲಿ ದಾವಾಆಸ್ತಿ ಪೋಡಿಯಾಗಿತ್ತು ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿ ಎಂದಿಗೂ

ದಾವಾಸ್ವತ್ತನ್ನು ನನಗೆ ಮಾರಾಟ ಮಾಡಿರುವುದಿಲ್ಲ, ಅದನ್ನು ಕಬಳಿಸುವ ದುರುದ್ದೇಶದಿಂದ ನಾನು ಮತ್ತು ಸಿದ್ದೇಗೌಡ ಸೇರಿ ನಿಪಿ1 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ಯಾವುದೇ ಹಣ ಪಾವತಿ ಮಾಡಿರುವುದಿಲ್ಲ, ಆದ ಕಾರಣ ಆ ಸಂಬಂಧ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಪ್ರತಿವಾದಿ 6 ಪರ ವಕೀಲರಿಂದಃ</u>

ದಾವಾಸ್ವತ್ತು ಮೂಲತಃ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಪಿತ್ರಾರ್ಜಿತ ಆಸ್ತಿಯಾದರೆ ಎಲ್ಲಾ ವಾರಸುದಾರರನ್ನು ಕ್ರಯಪತ್ರದಲ್ಲಿ ಪಕ್ಷಗಾರರಾಗಿ ಮಾಡಿ ಅವರ ಸಹಿಗಳನ್ನು ಪಡೆದುಕೊಳ್ಳಬೇಕು ಎಂದರೆ ಸರಿ. ನಿಪಿ1 ಕ್ಕೆ ಸ್ವಾಮಿ ರವರ ಹೆಂಡತಿ ಹಾಗೂ ಮಕ್ಕಳ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ದಾವಾಸ್ವತ್ತು ಸ್ವಾಮಿಯ ತಾತನ ಆಸ್ತಿ ಎಂದರೆ ಸಾಕ್ಷಿ ಸಿದ್ದೇಗೌಡ ನನಗೆ ಆತನ ಸ್ವಂತ ಆಸ್ತಿ ಎಂದು ಹೇಳಿರುತ್ತಾರೆ. ನಿಪಿ1 ರಲ್ಲಿ ಪಿತ್ರಾರ್ಜಿತ ಆಸ್ತಿ ಎಂದು ನಮೂದಾಗಿದೆ ಎಂದರೆ ಸಾಕ್ಷಿ ಸಿದ್ದೇಗೌಡರಿಗೆ ಅವರ ತಂದೆ ಕಡೆಯಿಂದ ಬಂದಿರುತ್ತದೆ ಎನ್ನುವರು. ನಿಪಿ1 ರ ಕಾಲದಲ್ಲಿ ಪ್ರತಿವಾದಿ 7 ಮತ್ತು 8 ರವರಿಗೂ ಸಹ ದಾವಾಆಸ್ತಿ ಮೇಲೆ ಹಕ್ಕು ಇತ್ತು ಎಂದರೆ ಗೊತ್ತಿಲ್ಲ. 6 ನೇ ಪ್ರತಿವಾದಿ ಗಂಡ ದಿನಾಂಕ 8.7.2020 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ಅವರು ಮೃತಪಟ್ಟ ನಂತರ ಅವರಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ನನಗೆ ತಿಳಿದಿರುತ್ತದೆ. ಪ್ರತಿವಾದಿ 6 ರಿಂದ 8 ರವರಿಗೆ ನಾನು ವಕೀಲರ ಮೂಲಕ ತಿಳುವಳಿಕೆ ನೋಟಿಸ್ ನೀಡಿರುತ್ತೇನೆ. ಪ್ರತಿವಾದಿ 6 ರಿಂದ 8 ರವರು ನಿಪಿ1 ರಲ್ಲಿ ಪಕ್ಷಗಾರರಾಗಿರದ ಕಾರಣ ಅವರ ವಿರುದ್ಧ ನಾನು ಯಾವುದೇ ಪರಿಹಾರ ಪಡೆದುಕೊಳ್ಳಲು ಯೋಗ್ಯನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 6 ರಿಂದ 8 ರವರ ವಿರುದ್ಧ ಅಕ್ರಮ ಲಾಭ ಪಡೆಯುವ ದುರುದ್ದೇಶದಿಂದ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. (ಮೇಲೆ ಇರುವ ಪಾಟೀ ಸವಾಲನ್ನೇ ಉಳಿದ ಪಾಟೀ ಸವಾಲಾಗಿ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ)

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.